# ಚಮ್ಮಾರರು ಮತ್ತು ಮಾದಾರ ಸಮಾಜದವರಿಗೆ ದವಸಧಾನ್ಯ ವಿತರಣೆ

**ಚಿತ್ರದುರ್ಗ, ಮೇ - 26** ಲಾಕ್‌ಡೌನ್ ಸಂದರ್ಭದಲ್ಲಿ ಸಂಕಷ್ಟದಲ್ಲಿರುವ ಶ್ರಮಿಕ ವರ್ಗದವರು, ನಿರ್ಗತಿಕರು, ನಿರಾಶ್ರಿತರು, ಬಡವರು, ದಿನಗೂಲಿ ಕಾರ್ಮಿಕರಿಗೆ ಚಿತ್ರದುರ್ಗ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಿಂದ ದವಸ -ಧಾನ್ಯ ವಿತರಿಸುತ್ತಿದ್ದು, ಡಾ. ಶಿವಮೂರ್ತಿ ಮುರುಘಾ ಶರಣರು ಇಂದು ಚಮ್ಮಾರರು ಮತ್ತು ಮಾದಾರ ಸಮಾಜದವರಿಗೆ ದವಸ ಧಾನ್ಯ ವಿತರಿಸಿದರು. ಇಂದಿನ ದವಸ ಧಾನ್ಯ ದಾಸೋಹವನ್ನು ವೀರಶೈವ ಸಮಾಜ ಚಿತ್ರದುರ್ಗ ಇವರು ವಹಿಸಿಕೊಂಡಿದ್ದರು.

ಈ ಸಂದರ್ಭದಲ್ಲಿ ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ವೀರಶೈವ ಸಮಾಜದ ಅಧ್ಯಕ್ಷ ಎಲ್.ಬಿ.ರಾಜಶೇಖರ್, ಕಾರ್ಯದರ್ಶಿ ಎನ್.ಬಿ.ವಿಶ್ವನಾಥ್, ಶ್ರೀಮತಿ ಮೋಕ್ಷ ರುದ್ರಸ್ವಾಮಿ, ಕಣಿವೆಮಾರಮ್ಮ ಸಂಘದ ಅಧ್ಯಕ್ಷ ಎಂ.ತಿಪ್ಪೇಸ್ವಾಮಿ, ಗುತ್ತಿನಾಡು ಪ್ರಕಾಶ್, ಕಂಠೇಶ್ವರ ತಿಪ್ಪೇಸ್ವಾಮಿ, ಬಸವರಾಜ ಕಟ್ಟಿ, ಎಸ್.ಷಡಾಕ್ಷರಯ್ಯ, ನಗರಸಭೆ ಸದಸ್ಯ ಜಯಣ್ಣ, ಚಿನ್ಮಯಾನಂದ, ಡಿ.ಟಿ. ಶಿವಾನಂದಪ್ಪ, ವಿಜಯಕುಮಾರ್, ನವಕೋಟಿ, ಜಿ.ಜೆ.ಹಳ್ಳಿ ತಿಪ್ಪೇಸ್ವಾಮಿ ಮೊದಲಾದವರಿದ್ದರು.




COVID-19

